ತುಳಿದಿರುವ ಹಾದಿ ನೋಡಿದರೆ, ಅಂತಹ ಕೆಲಸವನ್ನು ಮಾಡುವಷ್ಟು ಸಮರ್ಥರು ತಯಾರಾಗುತ್ತಿಲ್ಲವೆಂದೇ?

ದಲಿತ ಬಂಡಾಯ ಸಾಹಿತ್ಯದ ನಂತರದ ಮೂರು ದಶಕಗಳಲ್ಲಿ, ಅದರಲ್ಲೂ ಇಪ್ಪತ್ತೊಂದನೇ ಶತಮಾನದಲ್ಲಿ ಸೃಷ್ಟಿಯಾಗುತ್ತಿರುವ ಸಾಹಿತ್ಯವನ್ನು ಗಮನಿಸಿದರೆ, ಬೆರಗು ಹುಟ್ಟಿಸುವಂತಿದೆ. ಆದರೆ, ಸಾಹಿತ್ಯ ಚಳವಳಿಗಳೇ ಇಲ್ಲದ ಕಾಲದ ಸಾಹಿತ್ಯವನ್ನು ಹೇಗೆ ನೋಡಬೇಕು ಎಂಬುದು ತೋಚದೆ, ಡಿ.ಆರ್. ತಲೆಮಾರಿನ ವಿಮರ್ಶಕರು ಕೂಡ ಇಂದು ತಮಗೆ ತಿಳಿದಿರುವ ಹೊಸ ತಲೆಮಾರಿನ ಯಾವುದೋ ಒಬ್ಬ ಕವಿ, ಕತೆಗಾರ, ಕಾದಂಬರಿಕಾರರ ಹೆಸರನ್ನು ಹೇಳಿ, ಅವರನ್ನು ಇಡೀ ತಲೆಮಾರಿನ ಪ್ರತಿನಿಧಿಯೆಂಬಂತೆ ಕರೆಯುವ ವೈಚಿತ್ರ್ಯ ಕಂಡುಬರುತ್ತಿದೆ. ಇಲ್ಲಿಯವರೆಗಿನ ಕನ್ನಡ ಸಾಹಿತ್ಯ ವಿಮರ್ಶೆಯ ಇತಿಹಾಸನ್ನೇ ನೋಡಿದರೂ, ಅದು 'ಹೊಂದಿಸಿ ಬರೆಯಿರಿ ವಿಮರ್ಶೆ' ಎಂದು ಕರೆಯುವ ಹಾಗೆಯೇ ಇದೆ. ಖ್ಯಾತನಾಮರ ಕೃತಿಗಳ ಕುರಿತು ಬಂದಿರುವಷ್ಟು ವಿಮರ್ಶೆ ಬೇರೆಯವರ ಬಗ್ಗೆ ಬಂದಿಲ್ಲ. ಕರ್ನಾಟಕದ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳ ಸಾಹಿತ್ಯ ವಿಭಾಗಗಳು ವಿಮರ್ಶೆ, ಸಂಶೋಧನೆ ಎಂದರೆ ಕೇವಲ ಹಿಂದಿನ ಸಾಹಿತ್ಯ, ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ, ವ್ಯಾಖ್ಯಾನಿಸುವ, ವಿಶ್ಲೇಷಿಸುವ, ಶೋಧಿಸುವ ಕೆಲಸವೆಂದೇ ಹೇಳಿಕೊಟ್ಟಂತೆ ಕಾಣುತ್ತದೆ. ಅದನ್ನೂ ಹಳೆಯ ವಿಮರ್ಶಾ ಮಾದರಿಗಳನ್ನಿಟ್ಟುಕೊಂಡೇ ಇಂದಿಗೂ ನೋಡಲಾಗುತ್ತಿದೆಯೇ ಹೊರತು, ಯಾವ ಹೊಸ ವಿಧಾನವೂ ನನ್ನ ಕಣ್ಣಿಗೆ ಬಿದ್ದಿಲ್ಲ. ಅಂತಹದರಲ್ಲಿ ಇಂದಿನ ಸಾಹಿತ್ಯವನ್ನು ಹೇಗೆ ನೋಡಬಹುದು ಎಂಬುದನ್ನು ಕಲಿಸಬೇಕಿತ್ತು ಎಂದು ಹೇಗೆ ತಾನೇ ಕೇಳಲಿ? ಹೊಸ ತಲೆಮಾರಿನವರ ಸಾಹಿತ್ಯವನ್ನು ಸುರೇಶ್ ನಾಗಲಮಡಿಕೆ ಹಾಗೂ ರವಿಕುಮಾರ್ ನೀಹ ಅವರಂತಹ ಹೊಸ ತಲೆಮಾರಿನ ವಿಮರ್ಶಕ, ಸಂಶೋಧಕರಾದರೂ ಗಮನಿಸಿರುವುದು ನನ್ನನ್ನು ತುಂಬ ಸಿನಿಕಲ್ ಆಗುವುದರಿಂದ ತಪ್ಪಿಸಿದೆ. ಆದರೆ, ಕನ್ನಡ ಸಾಹಿತ್ಯವನ್ನು ಕನ್ನಡ ಪುಸ್ತಕಗಳನ್ನಷ್ಟೇ ಓದಿಕೊಂಡು ವಿಶ್ಲೇಷಿಸಲಾಗದು, ಅಂತರರಾಷ್ಟ್ರೀಯ ಮಟ್ಟದ ಅಕಡೆಮಿಕ್ ತರಬೇತಿ ಬೇಕು ಎಂದು ನಾನು ವಾದಿಸುವುದಿಲ್ಲವಾದರೂ, ಅಂತರರಾಷ್ಟ್ರೀಯ ಮಟ್ಟದ ವಿಮರ್ಶಾ ಹಾಗೂ ಸಂಶೋಧನಾ ವೈಧಾನಿಕತೆಗಳನ್ನು ಅರಗಿಸಿಕೊಳ್ಳುವಷ್ಟು ಇಂಗ್ಲಿಷ್ ಜ್ಞಾನವಂತೂ ಅತ್ಯಗತ್ಯ. ಇದನ್ನೇ ಅಲ್ಲವೇ ಮೇಲೆ ಶ್ರೀಗಳು ಹಾಗೂ ಬಸವಲಿಂಗಪ್ಪನವರು ಹೇಳಿರುವುದು? ಆದರೆ, ಇಂದು ಕನ್ನಡದ ಪಾಡು ನೋಡಿ. ಎಂಟು ಜ್ಞಾನಪೀಠಗಳನ್ನು ಪಡೆದಿರುವುದಾಗಿ ಬೀಗುತ್ತೇವೆ. ಆದರೆ, ಜ್ಞಾನಪೀಠದಿಂದ ಏನಾಗಬೇಕು? ಏಳು ಕೋಟಿ ಜನಸಂಖ್ಯೆಯ ಕನ್ನಡಿಗರಲ್ಲಿ, ಹೊಸ ತಲೆಮಾರಿನವರಲ್ಲಿ ಏಳು ಮಂದಿ ಹೇಳಿಕೊಳ್ಳುವ ವಿಮರ್ಶಕ, ಸಂಶೋಧಕರು ಕರ್ನಾಟಕದಲ್ಲಿ, ಭಾರತದಲ್ಲಾಗಲಿ, ಅದರಿಂಚೆಗಾಗಲಿ ಸಿಗದಿರುವಾಗ? ಇದಕ್ಕೆ ಯಾರನ್ನು ದೂರಬೇಕು?

**ವಿಮರ್ಶೋತ್ತರ ವಿಮರ್ಶೆಯ ಕಾಲಘಟ್ಟದಲ್ಲಿ**

ವಿಮರ್ಶೆ ಹಾಗೂ ರಾಜಕಾರಣವನ್ನು ಬೇರೆ ಬೇರೆ ಮಾಡಿ ನೋಡಲು ಸಾಧ್ಯವೇ? ಎಂದು ಯಾರಾದರೂ ನನ್ನನ್ನು ಕೇಳಿದರೆ, ಇಲ್ಲ ಎಂದೇ ಹೇಳುತ್ತೇನೆ. ಹಾಗಾಗಿಯೇ, ಈ ಪ್ರಬಂಧದುದ್ದಕ್ಕೂ ಅವೆರಡನ್ನೂ ಜೊತೆಜೊತೆಯಲ್ಲಿ ತಂದಿದ್ದೇನೆ. ಶ್ರೀಯವರ ನುಡಿಗಟ್ಟನ್ನು ಬಳಸಿ ಹೇಳುವುದಾದರೆ, ವಿಮರ್ಶೆ ಎಂದರೆ ಸಂಪ್ರದಾಯಭಂಗ, ಸಂಪ್ರದಾಯಭಂಗವೆಂದರೆ ವಿಮರ್ಶೆ. ಹಾಗಾಗಿ, ಇಲ್ಲಿಯವರೆಗಿನ ಕನ್ನಡ ವಿಮರ್ಶಾ ಸಂಪ್ರದಾಯವನ್ನು ಭಂಗಗೊಳಿಸದೆ ಹೊಸ ವಿಮರ್ಶಾ ವಿಧಾನಗಳನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಹಾಗಾದರೆ, ಏನು ಮಾಡಬೇಕು ಎಂಬ ಪ್ರಶ್ನೆಗೆ ಕೊಡಬಹುದಾದ ಉತ್ತರ ಈ ಪ್ರಬಂಧ ಮಾದರಿಗೆ ನಿಲುಕುವಂತದ್ದಲ್ಲ. ಐದು ದಶಕಗಳ ಹಿಂದೆ ಇದ್ದ ಹಾಗೆ, ಇಂದು ಮತ್ತೆ ಕರ್ನಾಟಕದಲ್ಲಿ ಅಹಿಂದ ಪರ ಸರಕಾರವಿದೆ. ಅಂದಿನ ಹಾಗೆಯೇ, ಹಿಂದುಳಿದ ಜಾತಿಯವರು ಮುಖ್ಯಮಂತ್ರಿಯಾಗಿದ್ದಾರೆ. ಆದರೆ, ಇಂದು ಬಸವಲಿಂಗಪ್ಪನವರಿಲ್ಲ. ಡಿಎಸ್ಎಸ್, ಹತ್ತು ಹಲವು ಹೋಳಾಗಿದೆ. ದಲಿತ ಸಾಹಿತ್ಯ ಸೃಷ್ಟಿಯಾಗುತ್ತಲೇ ಇದ್ದರೂ, 1970ರ ದಶಕದ ದಲಿತನಿಗೂ ಇಂದಿನ ದಲಿತನಿಗೂ ವ್ಯತ್ಯಾಸವಿದೆ. ಹಾಗೆಯೇ, ಅಂದಿನ ದಲಿತ ಸಾಹಿತ್ಯ ಹಾಗೂ ಇಂದಿನ ದಲಿತ ಸಾಹಿತ್ಯದಲ್ಲೂ. ಎರಡೂ ಒಂದೇ ಎಂದು ಹೇಳಬಹುದೇ? ಒಂದರ್ಥದಲ್ಲಿ ಹೌದು, ಮತ್ತೊಂದು ಅರ್ಥದಲ್ಲಿ ಇಲ್ಲ.